## ಸೂಕ್ತಿಪ್ರಭ

ಎಲ್ಲೋ ಪುಸ್ತಕದಿಂದ ಕಲಿತ ಸ್ವಲ್ಪವನ್ನು ಎಲ್ಲರೂ ಉಪನ್ಯಾಸ ಮಾಡಲು ಬಯಸುವರು. ಇನ್ನೊಬ್ಬರಿಗೆ ಕಲಿಸುವುದು ಬಹಳ ಕಷ್ಟದ ಕೆಲಸ. ದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡ ಮೇಲೆ ಅವನ ಅಪ್ಪಣೆಯಾದವರು ಮಾತ್ರ ಇನ್ನೊಬ್ಬರಿಗೆ ಬೋಧಿಸಬಹುದು. —ಶ್ರೀರಾಮಕೃಷ್ಣ ಪರಮಹಂಸ

ಸತ್ಯದ ಪರಂಜ್ಯೋತಿಯಿಂದ ಯಾರು ಪರಿಶುದ್ಧಾತ್ಮರಾಗಿರುವರೋ ಅವರೇ ನಿಜವಾದ ಗುರುಗಳು. —ಶ್ರೀರಾಮಕೃಷ್ಣ ಪರಮಹಂಸ

ತಂಗಾಳಿಯು ಬೀಸಿ ಪೂರ್ಣ ವಿಕಸಿತವಾದ ಹೂವಿನ ಪರಿಮಳವನ್ನು ದಿಕ್ಕುದಿಕ್ಕಿಗೆ ಹರಡಿದಾಗ ದುಂಬಿಗಳು ತಮಗೆ ತಾವೇ ಬರುವುವು. ಸಿಹಿ ಪದಾರ್ಥಗಳು ಇರುವ ಸ್ಥಳಕ್ಕೆ ಇರುವೆಗಳನ್ನು ಯಾರೂ ಕರೆಯಬೇಕಾಗಿಲ್ಲ. ಇದರಂತೆಯೇ ಯಾವಾಗ ಒಬ್ಬನು ಪರಿಶುದ್ಧನಾಗಿ ಪರಿಪೂರ್ಣನಾಗುವನೋ ಆಗ ಅವನಲ್ಲಿರುವ ಮಂಗಳಗುಣಗಳ ಮಾಧುರ್ಯ ಸುತ್ತಲೂ ಹಬ್ಬುವುದು. ಸತ್ಯಾನ್ವೇಷಕರೆಲ್ಲ ಸಹಜವಾಗಿಯೇ ಅವನ ಹತ್ತಿರಕ್ಕೆ ಬರುವರು. ತನ್ನ ಮಾತುಗಳನ್ನು ಕೇಳುವಂಥ ಪ್ರೇಕ್ಷಕರ ಸಂದಣಿಯನ್ನು ಅವನು ಹುಡುಕಿಕೊಂಡು ಹೋಗಬೇಕಾಗಿಲ್ಲ. —ಶ್ರೀರಾಮಕೃಷ್ಣ ಪರಮಹಂಸ

ಕಾಲಕ್ರಮದಲ್ಲಿ ನಿನ್ನ ಮನಸ್ಸೇ ನಿನಗೆ ಗುರುವಾಗುತ್ತದೆ. ಆಧ್ಯಾತ್ಮಿಕ ಸಾಧನೆ ಅಂದರೆ ಇನ್ನೇನೆಂದು ತಿಳಿದೆ? ಸದಾ ಭಗವಂತನ ಪಾದಗಳಲ್ಲಿ ಮನಸ್ಸನ್ನು ಇಟ್ಟಿರುವುದೇ ಸಾಧನೆ; ಮನಸ್ಸಿನಲ್ಲಿ ಸದಾ ಭಗವಂತನ ಸ್ಮರಣೆ ಮಾಡುವುದೇ ಸಾಧನೆ.

—ಶ್ರೀಮಾತೆ ಶಾರದಾದೇವಿ

ಮಂತ್ರದಿಂದ ಶರೀರ ಶುದ್ಧವಾಗುತ್ತದೆ. ಭಗವಂತನ ನಾಮಜಪದಿಂದ ಮನುಷ್ಯ ಪವಿತ್ರನಾಗುತ್ತಾನೆ, ಪುನೀತನಾಗುತ್ತಾನೆ. ಈ ಮಂತ್ರದಿಂದ ಇನ್ನೇನಾಗದೆ ಹೋದರೂ ಶರೀರವಂತೂ ಪರಿಶುದ್ಧ ಆಗೇ ಆಗುತ್ತದೆ. —ಶ್ರೀಮಾತೆ ಶಾರದಾದೇವಿ

ಭಗವಂತನ ಮಂತ್ರಜಪದಿಂದ ಮನುಷ್ಯ ಶುದ್ಧನಾಗುತ್ತಾನೆ. ಒಂದು ಮಾತಿದೆ—"ಮನುಷ್ಯರೂಪದ ಗುರು ಮಂತ್ರವನ್ನು ಕಿವಿಯಲ್ಲಿ ಉಚ್ಚರಿಸಿದರೆ, ದೇವರು ಜೀವಕ್ಕೆ ಹೊಸ ಚೇತನವನ್ನೇ ಕೊಡುತ್ತಾನೆ" ಎಂದು. —ಶ್ರೀಮಾತೆ ಶಾರದಾದೇವಿ

ಯಾರಿಂದ ನಾವು ಆಧ್ಯಾತ್ಮಿಕ ಪ್ರಚೋದನೆಯನ್ನು ಪಡೆಯುವೆವೋ ಅವರೇ ನಿಜವಾದ ಗುರುಗಳು. ಆಧ್ಯಾತ್ಮಿಕ ಶಕ್ತಿ ಅವರ ಮೂಲಕ ನಮಗೆ ಹರಿದುಬರುವುದು. ಆಧ್ಯಾತ್ಮಿಕ ಪ್ರಪಂಚಕ್ಕೂ ನಮಗೂ ಸಂಬಂಧವನ್ನು ಕಲ್ಪಿಸುವವರು ಅವರು. —ಸ್ವಾಮಿ ವಿವೇಕಾನಂದ

ಒಬ್ಬನಲ್ಲಿ ಬ್ರಹ್ಮ ಜಾಗೃತನಾದರೆ ಆ ಬೆಳಕಿನ ಸಹಾಯದಿಂದ ಸಾವಿರಾರು ಜನ ಮುಂದುವರಿಯಲು ಸಹಾಯವಾಗುವುದು. ಬ್ರಹ್ಮಜ್ಞಾನಿಗಳು ಮಾತ್ರ ಜಗದ್ಗುರುಗಳು. ಎಲ್ಲ ಶಾಸ್ತ್ರಗಳೂ ಮತ್ತು ಯುಕ್ತಿಯೂ ಇದನ್ನು ಸಮರ್ಥಿಸುವುದು. —ಸ್ವಾಮಿ ವಿವೇಕಾನಂದ

## ಪ್ರಾರ್ಥನೆ

### ಮಾನಸೋಲ್ಲಾಸದಿಂದ

**ಗುರುಪ್ರಸಾದಾಲ್ಲಭತೇ ಯೋಗಮಷ್ಟಾಂಗಲಕ್ಷಣಮ್ ।**
**ಶಿವಪ್ರಸಾದಾಲ್ಲಭತೇ ಯೋಗಸಿದ್ಧಿಂ ಚ ಶಾಶ್ವತೀಮ್ ॥**

ಶಿಷ್ಯನು ಗುರುವಿನ ಪ್ರಸಾದದಿಂದ ಅಷ್ಟಾಂಗ ಯೋಗವನ್ನೂ ಈಶ್ವರನ ಅನುಗ್ರಹದಿಂದ ಶಾಶ್ವತವಾದ ಯೋಗಸಿದ್ಧಿಯನ್ನೂ ಪಡೆಯುತ್ತಾನೆ.

**ಸಚ್ಚಿದಾನಂದರೂಪಾಯ ಬಿಂದುನಾದಾಂತರಾತ್ಮನೇ ।**
**ಆದಿಮಧ್ಯಾಂತಶೂನ್ಯಾಯ ಗುರೂಣಾಂ ಗುರವೇ ನಮಃ ॥**

ಸಚ್ಚಿದಾನಂದಸ್ವರೂಪನಾದ, ಬಿಂದುನಾದಗಳ ಅಂತರಾತ್ಮನಾದ, ಆದಿಮಧ್ಯಾಂತರಹಿತನಾದ ಗುರುಗಳ ಗುರುವಿಗೆ ನಮಸ್ಕಾರವು.

**ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ।**
**ತಸ್ಯೈ ತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥**

ಯಾರಿಗೆ ಈಶ್ವರನಲ್ಲಿ ನಿರತಿಶಯವಾದ ಭಕ್ತಿಯೋ, ದೇವರಂತೆಯೇ ಗುರುವಿನಲ್ಲಿಯೂ ಭಕ್ತಿ ಇರುತ್ತದೆಯೋ ಅಂತಹ ಮಹಾತ್ಮನಿಗೆ ಗುರೂಪದೇಶದ ಅರ್ಥಗಳು ಹೊಳೆದು ಕಾಣುತ್ತವೆ.

**ಪ್ರಕಾಶಾತ್ಮಿಕಯಾ ಶಕ್ತ್ಯಾ ಪ್ರಕಾಶಾನಾಂ ಪ್ರಭಾಕರಃ ।**
**ಪ್ರಕಾಶಯತಿ ಯೋ ವಿಶ್ವಂ ಪ್ರಕಾಶೋಽಯಂ ಪ್ರಕಾಶತಾಮ್ ॥**

ಪ್ರಕಾಶರೂಪವಾದ (ತನ್ನ) ಶಕ್ತಿಯಿಂದ ಎಲ್ಲ ಬೆಳಕುಗಳಿಗೂ ಬೆಳಕನ್ನು ಕೊಟ್ಟು ವಿಶ್ವವನ್ನೇ ಬೆಳಗುವ ಈ ಪ್ರಕಾಶವು ನನ್ನಲ್ಲಿಯೂ ಪ್ರಕಾಶಿಸಲಿ.

**ಈಶ್ವರೋ ಗುರುರಾತ್ಮೇತಿ ಮೂರ್ತಿಭೇದವಿಭಾಗಿನೇ ।**
**ವ್ಯೋಮವದ್ವ್ಯಾಪ್ತದೇಹಾಯ ದಕ್ಷಿಣಾಮೂರ್ತಯೇ ನಮಃ ॥**

ಈಶ್ವರ ಗುರು ಆತ್ಮರೆಂಬ ರೂಪಭೇದಗಳಿಂದ ಭಿನ್ನವಾಗಿ ಕಾಣುವವನಾದರೂ ಆಕಾಶದಂತೆ ಸರ್ವವ್ಯಾಪಿಯಾಗಿರುವ ಶ್ರೀ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಆತ್ಮಲಾಭಾತ್ಪರೋ ಲಾಭೋ ನಾಸ್ತೀತಿ ಮುನಯೋ ವಿದುಃ ।**
**ತಲ್ಲಾಭಾರ್ಥಂ ಗುರು ಸ್ತೌತಿ ಸ್ವಾತ್ಮಾನಂ ಪರಮೇಶ್ವರಮ್ ॥**

ಆತ್ಮಲಾಭಕ್ಕಿಂತಲೂ ಶ್ರೇಷ್ಠವಾದ ಲಾಭವಿಲ್ಲವೆಂದು ಋಷಿಗಳು ತಿಳಿದಿದ್ದರು. ಆ ಸಾಕ್ಷಾತ್ಕಾರಕ್ಕೋಸ್ಕರ ಗುರುವು ತನ್ನ ಆತ್ಮನೇ ಆದ ಪರಮೇಶ್ವರನನ್ನು ಸ್ತೋತ್ರ ಮಾಡುತ್ತಾನೆ.